





ಮಹಾರಾಷ್ಟ್ರದ ನಂದುದರ್ಬಾರ್ ಜಿಲ್ಲೆಯಲ್ಲಿರುವ ತೋರಣಮಲ್ ಗಿರಿಧಾಮ ಎಲೆಮರೆಯ ಕಾಯಿಯಂತೆ. ಈ ಪುಟ್ಟ ಗಿರಿಧಾಮ ಕೇವಲ 44 ಚ. ಕಿ.ಮೀ ವಿಸ್ತೀರ್ಣ ಹೊಂದಿದ್ದು ಸಾತ್ಪುರ್ ವಲಯದಲ್ಲಿದೆ. ಹಸಿರಿನ ಬೆಟ್ಟಗಳಿಂದ ಸುತ್ತುವರಿದಿದ್ದು, ಈ ರಾಜ್ಯದ ಎರಡನೇ ಅತಿ ತಂಪಾದ ಗಿರಿಧಾಮ ಎಂಬ ಖ್ಯಾತಿ ಹೊಂದಿದೆ.

ಇಲ್ಲಿರುವ ಹೇರಳ ತೋರ್ನ ಮರಗಳಿಂದಾಗಿ ಈ ಗಿರಿಧಾಮಕ್ಕೆ ತೋರಣಮಲ್ ಎಂಬ ಹೆಸರು ಬಂದಿದೆ. ಗಿರಿಧಾಮದ ಪ್ರಮುಖ ಆಕರ್ಷಣೆ ಇಲ್ಲಿರುವ ಲೋಟಸ್ ಕೆರೆ. ಸ್ಥಳೀಯರು ಇದನ್ನು ಕಮಲ್ ತಲಾವ್ ಎಂದೇ ಕರೆಯುತ್ತಾರೆ. ಹೇರಳವಾಗಿ ಅರಳುವ ಕಮಲದ ಹೂಗಳು ಕೆರೆಯ ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸಿದೆ. ಇದೇ ಕೆರೆ ಮುಂದೆ ಕಣಿವೆಯ ಮೂಲಕ ಹರಿದು ಜಲಪಾತದ ರೂಪದಲ್ಲಿ ಮೇಲಿನಿಂದ ಧುಮ್ಮಿಕ್ಕುವ ದೃಶ್ಯ ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತದೆ.

ಇನ್ನೊಂದು ಪ್ರವಾಸಿ ಆಕರ್ಷಣೆಯೆಂದರೆ ಆವಶಬರಿ ಪಾಯಿಂಟ್. ಇದೊಂದು ವೀಕ್ಷಣಾ ತಾಣವಾಗಿದ್ದು ಇಲ್ಲಿ ನಿಂತು ಸುತ್ತಮುತ್ತ ಹಸಿರಿನಿಂದ ಕೂಡಿದ ಪ್ರಕೃತಿ ಸೌಂದರ್ಯವನ್ನು ಸವಿಯಬಹುದು. ದೂರದಲ್ಲಿ ಅರಣ್ಯ ಇಲಾಖೆಯ ವಿಶ್ರಾಂತಿಧಾಮದ ವಿಹಂಗಮ ನೋಟವನ್ನೂ ನೋಡಬಹುದು. ಸಮೀಪದಲ್ಲೇ ಇತಿಹಾಸಪ್ರಿಯರಿಗೆ ಇಷ್ಟವಾಗುವ ಗೊಂಡ್‌ರಾಜ್ ಕೋಟೆ-ಯಿದೆ. ಧಾರ್ಮಿಕ ಒಲವು ಉಳ್ಳವರು ಸಮೀಪದ ಜಲೀಂದ್ರನಾಥ್ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ತೋರಣಮಲ್‌ನಲ್ಲಿರುವ ಸ್ವಾಭಾವಿಕ ಗುಹೆಗಳು ಇನ್ನೊಂದು ಆಕರ್ಷಣೆ. ಇಲ್ಲೇ ಮಚ್ಚೀಂದ್ರನಾಥ್ ಋಷಿಗಳು ತಪಸ್ಸು ಮಾಡಿದ್ದರು ಎನ್ನುವ ಐತಿಹ್ಯವಿದೆ. ಈ ಗುಹೆಗಳನ್ನು ಮಚ್ಚೀಂದ್ರನಾಥ್ ಗುಹೆಗಳು ಎಂದೇ ಕರೆಯುತ್ತಾರೆ. ಇಲ್ಲಿ ಮಾರ್ಕಂಡೇಯ ಋಷಿಗಳ ಪೀಠವೂ ಇದೆ.

ಬುಡಕಟ್ಟು ಜನರ ಗ್ರಾಮದೇವತೆಯಾದ ತೋರಣಾದೇವಿ ದೇವಸ್ಥಾನ ಇಲ್ಲಿದೆ. ಸಮೀಪದ ಯಶವಂತ ಕೆರೆ ಆಕರ್ಷಕವಾಗಿದೆ. 1.6 ಚದರ ಕಿ.ಮೀ ವಿಸ್ತೀರ್ಣದ ಈ ನೈಸರ್ಗಿಕ ಕೆರೆಯಲ್ಲಿ ದೋಣಿವಿಹಾರದ ಸೌಲಭ್ಯವೂ ಇದೆ. ಕೆರೆಯಲ್ಲಿ ಮೀನು ಹಿಡಿಯುವವರೂ ಇದ್ದಾರೆ. ಹಿರಿಯ ಮುತ್ಸದ್ದಿ ಯಶವಂತ ರಾವ್ ಚವ್ಹಾಣ್ ಅವರ ಸ್ಮರಣಾರ್ಥ ಈ ಹೆಸರಿಡಲಾಗಿದೆ. ಇಲ್ಲಿ ಸೂರ್ಯಾಸ್ತ ವೀಕ್ಷಣೆ ಒಂದು ಅನನ್ಯ ಅನುಭವ. ಗೋರಕನಾಥ್ ಮತ್ತು ನಾಗಾರ್ಜುನ ದೇವಾಲಯಗಳ ಸಹಿತ ಹಲವು ದೇವಾಲಯಗಳು ಇರುವುದ-ರಿಂದ ಇದೊಂದು ಯಾತ್ರಾಸ್ಥಳವೇ ಆಗಿದೆ. ಗೋರಕ್‌ರಾಥ್ ದೇವಾಲಯಕ್ಕೆ ಮಹಾಶಿವರಾತ್ರಿಯ ಸಮಯದಲ್ಲಿ ಸಹಸ್ರಾರು ಭಕ್ತರು ಆಗಮಿಸುತ್ತಾರೆ.

ತೋರಣಮಲ್‌ನಿಂದ ಸುಮಾರು 1.5 ಕಿ.ಮೀ ಅಂತರದಲ್ಲಿರುವ ಒಂದು ಸುಂದರ ಕಣಿವೆ ಪ್ರದೇಶ ಸೀತಾ ಕಣಿವೆ. ಸ್ಥಳೀಯ ಭಾಷೆಯಲ್ಲಿ ಸೀತಾ ಖಾಯಿ ಎನ್ನುತ್ತಾರೆ. ಎತ್ತರದ, ಸುಂದರವಾದ ಕಣಿವೆ ಮಳೆಗಾಲದಲ್ಲಿ ಇನ್ನಷ್ಟು ರಮಣೀಯ. ಮಳೆಗಾಲದಲ್ಲಿ ಸಾಕಷ್ಟು ಕೃತಕ ಜಲಪಾತಗಳು ಹುಟ್ಟಿಕೊಂಡು ಮೇಲಿನಿಂದ ಕೆಳಕ್ಕೆ ಧುಮ್ಮಿಕ್ಕುವ ದೃಶ್ಯ ರೋಮಾಂಚನವನ್ನುಂಟು ಮಾಡುತ್ತದೆ.

ತೋರಣಮಲ್‌ನಲ್ಲಿರುವ ಖಡ್ಕಿ ಪಾಯಿಂಟ್ ಇನ್ನೊಂದು ವೀಕ್ಷಣಾ ತಾಣವಾಗಿದ್ದು ಎತ್ತರದಲ್ಲಿ ನಿಂತು ನೋಡಿದರೆ ಸುತ್ತ ಬೆರಗು ಹುಟ್ಟಿಸುವ ಹಸಿರು ಪ್ರಕೃತಿ ಸೌಂದರ್ಯ ಕಾಣಿಸುತ್ತದೆ. ಶತಮಾನಗಳ ಹಿಂದೆ ಈ ಸ್ಥಳದಲ್ಲಿ ಒಂದು ಅತೀ ಉದ್ದವಾದ ಬೃಹತ್ ಗೋಡೆಯು ಹಾಯ್ದು ಹೋಗಿತ್ತಂತೆ. ನಂತರ ಉತ್ಖನನದ ಸಮಯದಲ್ಲಿ ಇದರ ಸಾಕಷ್ಟು ಅವಶೇಷಗಳು ದೊರೆತಿವೆ. ಇಲ್ಲಿರುವ ಒಂದು ಪುರಾತನ ಚರ್ಚ್ ಕೂಡ ಸಾಕಷ್ಟು ಪ್ರಸಿದ್ಧಿ ಪಡೆದಿದೆ.

ಈ ಗಿರಿಧಾಮ ಆಯುರ್ವೇದ ಗಿಡಮೂಲಿಕೆಗಳ ತಾಣವೂ ಹೌದು. ಸಾಕಷ್ಟು ಗಿಡಮೂಲಿಕೆಗಳನ್ನು ಬೆಳೆಸಲಾಗಿದೆ. ಮಹಾರಾಷ್ಟ್ರದ ಪ್ರಮುಖ ನಗರ ಮತ್ತು ಪಟ್ಟಣಗಳಿಗೆ ಈ ಗಿರಿಧಾಮ ಸಾಕಷ್ಟು ಹತ್ತಿರವೇ ಇದೆ.

**ತಲುಪುವ ಮಾರ್ಗ:** ಮಹಾರಾಷ್ಟ್ರದ ಶಹಾಬಾದ್ ಪಟ್ಟಣದಿಂದ ಕೇವಲ ೫೫ ಕಿ.ಮೀ ಅಂತರದಲ್ಲಿರುವ ತೋರಣಮಲ್ ಗಿರಿಧಾಮಕ್ಕೆ ಹತ್ತಿರದ ರೈಲು ನಿಲ್ದಾಣ ಶಹಾಬಾದ್. ಹತ್ತಿರದ ವಿಮಾನ ನಿಲ್ದಾಣ ಸೂರತ್. ಉಳಿದಂತೆ ಸಾಕಷ್ಟು ಸಾರಿಗೆ ಬಸ್‌ಗಳ ವ್ಯವಸ್ಥೆ ಇದೆ.